**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ</u>**

CC No. 384 /2020
CW- 2 / PW- 2

ಹೆಸರು : ರಾಜೇಂದ್ರ ಪುತಳಪ್ಪ ಮರಿನಾಯಕ
ವಯಸ್ಸು : 48 ವರ್ಷ
ಉದ್ಯೋಗ : ಕೆ ಎಸ್ ಆರ್ ಟಿ ಸಿ ಚಾಲಕ / ನಿರ್ವಾಹಕ
ವಾಸಸ್ಥಳ : ಎಲ್ಲಿಮುನ್ನೋಳಿ ತಾಃ ಹುಕ್ಕೇರಿ

(ದಿನಾಂಕ 06-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**EVIDENCE BEFORE CHARGE :**

**<u>ಮುಖ್ಯ ವಿಚಾರಣೆ : ದೂರುದಾರರ ಪರ ಶ್ರೀ ವಿ ಎಸ್ ಎಚ್ ವಕೀಲರಿಂದ -</u>**

**1.** ನಾನು **4-8-2019** ರಂದು ಹುಕ್ಕೇರಿಯಿಂದ ಚಿಕ್ಕೋಡಿ ಮಾರ್ಗವಾಗಿ ಹೋಗುವ ಕೆ ಎಸ್ ಆರ್ ಟಿ ಸಿ ಬಸ್ ನಲ್ಲಿ ಕಂಡಕ್ಟರ ಎಮ್ ಡ್ರೈವರ ಆಗಿ ಕೆಲಸ ಮಾಡುತ್ತಿದ್ದೆ . ಆ ದಿನ ಮಧ್ಯಾಹ್ನ **3-30** ಕ್ಕೆ ಹುಕ್ಕೇರಿಯಿಂದ ಬಸ್ ಹೊರಟಿದ್ದು , ಹುಕ್ಕೇರಿಯಿಂದ ಒಂದು ಕಿಲೋಮೀಟರ್ ಮುಂದೆ ಆರೋಪಿಯ ತನ್ನ ಗಾಡಿಯನುನ ರೋಡ್ ಮೇಲೆ ಅಡ್ಡದಿಡ್ಡ ಗಾಡಿ ಓಡಿಸುತ್ತಾ ಇದ್ದ. ಆತ ತನ್ನ ವಾಹನವನ್ನು ನಮ್ಮ ಬಸ್ಸಿನ ಬಲಭಾಗದಿಂದ ಓವರಟೇಕ ಮಾಡಿ, ನಮ್ಮ ಬಸ್ಸಿನ ಮುಂಭಾಗ ಬಂದು ಸ್ಲೋ ಮಾಡಿದ . ನಂತರ ನಮಗೆ ಮುಂದೆ ಹೋಗಲು ಜಾಗ ಬಿಡಲಿಲ್ಲ . ಆಗ ಬಸ್ ಡ್ರೈವರ ಖಾಜಾಸಾಬ ಬಸ್ಸನ್ನು ನಿಲ್ಲಿಸಿದ . ಡ್ರೈವರ ಯಾಕಪ್ಪಾ ಹಿಂಗೆ ಯಾಕೆ ಮಾಡಿದೆ ಅಂತ ಕೇಳಿದರು . ಆರೋಪಿಯು ಬಸ್ಸಿನ ಡ್ರೈವರನ ಅಂಗಿ ಹಿಡಿದು ಹೊರಗಡೆ ಎಳೆದ . ನಮ್ಮ ಊರಿಗೆ ಬಾ ನಿನ್ನನ್ನು ನೋಡ್ಕೋತೀನಿ ಎಂದು ಹೇಳಿದ . ನಾನು ಒಳಗಡೆ ಟಿಕೆಟ್ ಮಾಡ್ತಾ ಇದ್ದೆ. ಆರೋಪಿಯು ನಮ್ಮ ಬಸ್ ಹನಜಾನಟ್ಟಿಗೆ ಹೋದಾಗ ನಾನು ಬಸ್ಸನಲ್ಲಿರುವ ಪ್ರಯಾಣಿಕರನ್ನು ಇಳಿಸುವಾಗ ಆತ ಡ್ರೈವರ್ ನ ಮೈಮೇಲೆ ಅಂಗಿ ಹಿಡಿದು ಜಗ್ಗಿ ತೆಗೆದು , ಬಡಿಯೋಕೆ ಚಾಲು ಮಾಡಿದ. ಬಡಿಯೋಕೆ ಚಾಲು ಮಾಡಿದಾಗ ಹಾಗೂ ಕೆಳಗಡೆ ಜಗ್ಗುವಾಗ ಡ್ರೈವರನ ಕಾಲು ಅಟಕಾಯಿಸಿತ್ತು . ನಂತರ ನಾನು ಬಸನಿಂದ ಕೆಳಗೆ ಇಳಿದು ನೋಡುವುದರಷ್ಟರಲ್ಲಿ ಆತ ಬಡಿದಮ ಗಾಡಿ ತಗೊಂಡು ಹೋಗಿಬಿಟ್ಟ .

2. ನಂತರ ನಾವು ಡ್ರೈವರನ್ನು ಸರಕಾರಿ ದವಾಖಾನೆಗೆ ತಂದೆವು , ಅಡ್ಮಿಟ್ ಮಾಡಿದ್ದೆವು . ಆ ದಿನ ನಾನೇ ಗಾಡಿ ಓಡಿಸಿಕೊಂಡು ಠಾಣೆಗೆ ಬಂದಿದ್ದೆವು . ಆಮೇಲೆ ಸ್ಟೇಷನ್ ಗೆ ಹೋದ ನಂತರ ಪೋಲಿಸರು ದವಾಖಾನೆಗೆ ಬಂದರು . ನಂತರ ಜಮಾತದವರು ಎಲ್ಲರೂ ಬಂದರು. ಬಂದು ನಾವೆಲ್ಲ ಮುಗಿಸಿಕೊಂಡೆವು, ನಿಮ್ಮದು ನೀವು ಹೋಗಿಬಿಡ್ರಿ ಅಂತ ಪೊಲೀಸರು ಅಂದರು. ನಾನು ಬಸ್ಸನ್ನು ತಗೊಂಡು ಡಿಪೋಗೆ ಹೋಗಿ ಗಾಡಿ ಹಚ್ಚಿಬಿಟ್ಟೆ.

**ಮರುವಿಚಾರಣೆ ಇಲ್ಲ**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ